# ಬೆಟ್ಟದ ಜೀವ: ಒಂದು ರೂಪಾತ್ಮಕ ವಿಶ್ಲೇಷಣೆ

**ಸಂಜಯ ಉಪ್ಪಿನ***

**DOI: https://doi.org/10.5281/zenodo.23096981**

**ABSTRACT**

ಶಿವರಾಮ ಕಾರಂತರ 'ಬೆಟ್ಟದ ಜೀವ' ಕಾದಂಬರಿಯ ಕಥಾವಸ್ತು ಹಾಗೂ ನಿರೂಪಣಾ ತಂತ್ರಗಳನ್ನು ರೂಪಾತ್ಮಕ ವಿಶ್ಲೇಷಣೆಯ ನೆಲೆಯಲ್ಲಿ ಇಲ್ಲಿ ಪರಿಶೀಲಿಸಲಾಗಿದೆ. ಕಾರಂತರು ತಮ್ಮ ವೈಯಕ್ತಿಕ ಆದರ್ಶಗಳನ್ನು ಪಾತ್ರಗಳ ಮೇಲೆ ಹೇರದೆ, ಸಮಷ್ಟಿಯ ಜೀವನ ವ್ಯಾಪಾರದಿಂದ ಹೊಮ್ಮುವ ನೈಜ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಕೃತಿಯಲ್ಲಿ ನಿರೂಪಕ 'ಶಿವರಾಮಯ್ಯ'ನ ಪಾತ್ರವು ವಾಸ್ತವವನ್ನು ಮೀರದ, ನಿರ್ಲಿಪ್ತ ಹಾಗೂ ವಸ್ತುನಿಷ್ಠ ಸಾಕ್ಷಿಪ್ರಜ್ಞೆಯಾಗಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಗುರುತಿಸಲಾಗಿದೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ನಿರಂತರ ಹೋರಾಟವನ್ನು ಅತಿರಂಜಿತವಾಗಿ ನಾಟಕೀಯಗೊಳಿಸದೆ (Undramatized narration), ಸಾವಯವ ನೆಲೆಯಲ್ಲಿ ಹಾಗೂ ರೂಪರಹಿತ ಸಂವೇದನೆಯಾಗಿ ಅಭಿವ್ಯಕ್ತಿಸಿರುವ ಕಾರಂತರ ಕಲಾತ್ಮಕ ಎಚ್ಚರಿಕೆಯನ್ನು ಈ ಬರಹವು ಶೋಧಿಸುತ್ತದೆ. ಕಥನ ಕೌಶಲ್ಯವು ಕೃತಕವಾಗದೆ, ಪ್ರಾದೇಶಿಕ ಅನುಭವಗಳು ಹೇಗೆ ಸಾರ್ವತ್ರಿಕ ಮೌಲ್ಯಗಳಾಗಿ ಮಾರ್ಪಟ್ಟಿವೆ ಎಂಬ ತಾತ್ವಿಕ ಚರ್ಚೆಯನ್ನು ಮಂಡಿಸಲಾಗಿದೆ.

**KEYWORDS:** ಬೆಟ್ಟದ ಜೀವ, ಶಿವರಾಮ ಕಾರಂತ, ರೂಪಾತ್ಮಕ ವಿಶ್ಲೇಷಣೆ, ನಿರೂಪಣಾ ತಂತ್ರ, ಮನುಷ್ಯ ಮತ್ತು ಪ್ರಕೃತಿ.

* **ಸಂಜಯ ಉಪ್ಪಿನ,** ಸಂಶೋಧನಾರ್ಥಿ, ಕನ್ನಡ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ, ಕೇರಳ.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಶಿವರಾಮ ಕಾರಂತರು ತೀರಾ ವೈಶಿಷ್ಟ್ಯಪೂರ್ಣವಾದ ಸಾಹಿತ್ಯ ಕೃಷಿಗೈದವರು. ಅವರ ಸಾಹಿತ್ಯಕ ಪ್ರಯೋಗಗಳು ಸಂಪ್ರದಾಯ ಶರಣತ್ವವನ್ನು ಕಾಯ್ದುಕೊಳ್ಳದೆ ಬೇರೆಯಾಗಿಯೇ ನಿಂತಿತು. ಹಾಗೆಂದು ಅಲ್ಲಿ ಕ್ರಾಂತಿಕಾರಕ ಆಲೋಚನಾ ಪ್ರವಾಹವು ಅವರ ಬರವಣಿಗೆಯ ಉದ್ದೇಶವಾಗಿರಲಿಲ್ಲ. ಮನುಷ್ಯ ಜೀವನದ ಮೇಲೆ ಧಾರ್ಮಿಕ ನಂಬಿಕೆಗಳು ಉಂಟುಮಾಡಿದ ಪರಿಸರದ ಹಿನ್ನೆಲೆಯನ್ನು ಗಾಢವಾಗಿ ಕಂಡು ಅದನ್ನು ಒಂದು ಕಾಲದ ಮೌಲ್ಯವನ್ನಾಗಿಸುವ ಸಾಹಿತ್ಯಕ ಪ್ರಯತ್ನಗಳು ಪ್ರಾಚೀನದಿಂದಲೂ ಸಾಕಷ್ಟು ಬಂದವು. ಅಂತೆಯೇ ಅದನ್ನೇ ಜೀವನ ಮೌಲ್ಯವನ್ನಾಗಿ ಹೇಳುವ ಕಾಲಘಟ್ಟಗಳನ್ನು ಗುರುತಿಸಿ ಸಾಹಿತ್ಯಕ ವಿವೇಚನೆಗಳಲ್ಲೂ ನಿತ್ಯ ಜೀವನದ ಸೊಗಸು, ಚೆಲುವು, ಧಾವಂತ, ಹೊಣೆಗಾರಿಕೆ, ಸಂಕಟಗಳನ್ನು ಎರಡನೆಯ ಹಂತದಲ್ಲಿ ಇರಿಸಿ ನೋಡಲಾಯಿತು. ನವೋದಯದ ಕಾಲಘಟ್ಟದಿಂದ ಇದರ ಓಟ ಹೆಚ್ಚಿನ ಮಟ್ಟಿಗೆ ನಿಧಾನವಾಯಿತು, ಜೀವಪರ ದೃಷ್ಟಿಕೋನಗಳಿಂದ ಬದುಕು – ಸಾಹಿತ್ಯವನ್ನು ಮನ್ನಣೆಗೆ ತಂದುಕೊಳ್ಳುವ ಸಂಪ್ರದಾಯವೊಂದು ಬೆಳೆಯಿತು. ಆದಾಗ್ಯೂ ಧರ್ಮ–ನಂಬಿಕೆಗಳು ಅಲ್ಲಿಯೂ ಪರದೆ ಹಿಂದೆ ನಿಂತು ಒತ್ತಾಸೆ ತುಂಬುವ ಕಾರ್ಯಗಳನ್ನು ಮಾಡುತ್ತಲೇ ಇದ್ದಂತೆ ತೋರುತ್ತದೆ. ಅದೇ ಕಾಲಘಟ್ಟದಲ್ಲಿ ಬರವಣಿಗೆ ಮಾಡುತ್ತಿದ್ದ ಕಾರಂತರು ಈ ಪ್ರಯತ್ನದಿಂದ ಸಂಪೂರ್ಣವಾಗಿ ಬೇರೆಯಾಗಿ ನಿಂತು ಮಾತನಾಡುವ ಕಲಾ ಒತ್ತಾಸೆಗಳನ್ನು ಜೀವಂತವಾಗಿಸಿದರು. ಬೆಟ್ಟದ ಜೀವ, ಚಿಗುರಿದ ಕನಸು, ಮೈಮನಗಳ ಸುಳಿಯಲ್ಲಿ, ಮೂಕಜ್ಜಿಯ ಕನಸುಗಳಂಥ ಅನೇಕ ಕಾದಂಬರಿಗಳಲ್ಲಿ; ಬಾಳ್ವೆಯೇ ಬೆಳಕು, ವಿಚಾರಶೀಲತೆ, ವಿಚಾರ ಸಾಹಿತ್ಯ ನಿರ್ಮಾಣ, ಪರಿಸರ ಎನ್ನುವ ವೈಚಾರಿಕ ಬರಹಗಳಲ್ಲಿ ಮನುಷ್ಯ ಜೀವನದ ಚೆಲುವು, ಒಲವು, ಸಂಕಟ, ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳು; ಜಗತ್ತಿಗೆ ಮನುಷ್ಯನಷ್ಟೇ ಗಟ್ಟಿಯಾಗಿ ಆತುಕೊಂಡಿರುವ ಜೀವಜಗತ್ತು ಇವೆಲ್ಲವನ್ನು ರೂಪರಹಿತವಾಗಿ ವಿವೇಚಿಸುವ ಕಲೆಗಾರಿಕೆಯನ್ನು ತಮ್ಮ ಬರಹಗಳಲ್ಲೆಲ್ಲಾ ರೂಪಿಸಿಕೊಂಡರು ಮಾತ್ರವಲ್ಲದೇ ಜೀವನದೃಷ್ಟಿಯಲ್ಲಿಯೂ ಅದನ್ನೇ ಮುಖ್ಯವಾಗಿರಿಸಿಕೊಂಡು ಜೀವನ ಕೃಷಿಗೈದರು.

ಕನ್ನಡದ ಸೀಮಿತ ವಿಮರ್ಶಾ ಲೋಕ ಇವರ ಕಲಾಸೃಷ್ಟಿಗಳನ್ನು ಬಹು ಆಯಾಮಗಳಿಂದ ವಿಮರ್ಶಿಸಿ ನಾಡಿನಲ್ಲಿ ಅನೇಕ ಮರುಚಿಂತನೆಗಳನ್ನು, ಸ್ಪಂದನೆಗಳನ್ನು ಉಂಟು ಮಾಡಿದೆ. ನಿರೂಪಕ ಹಿನ್ನೆಲೆ, ಪರಿಸರದ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ಪಾತ್ರದ ಹಿನ್ನೆಲೆ ಹೀಗೆ ಅನೇಕ ವಿವೇಚನೆಗಳ ಮೂಲಕ ನವೀನ ಮಾದರಿಯ ಅವಲೋಕನಗಳಿಗೆ ತೆರೆದುಕೊಂಡಿದ್ದಾರೆ. ಆದರೆ ಇವರ ಕಥಾ ವಸ್ತುವನ್ನು ರೂಪನಿರ್ದಿಷ್ಟವಾಗಿ ಕಂಡು ಅದರ ರೂಪಾತ್ಮಕ ನಿರ್ವಚನಗಳನ್ನು ಕಾಣಲು ಆಗಿರುವ ಪ್ರಯತ್ನಗಳು ತೀರಾ ವಿರಳ. ಇಲ್ಲಿ ರೂಪಸಹಿತ ಎನ್ನುವುದರ ಅರ್ಥ Dramatise Narration ಮತ್ತು ರೂಪ ರಹಿತ ಎನ್ನುವುದು Undramatise Narration; ಇವುಗಳನ್ನು ಆಧರಿಸಿಕೊಂಡು ಆಗಿರುವ ಚಿಂತನೆಗಳು ತೀರಾ ಕಡಿಮೆ. ಅದೇ ಹಿನ್ನೆಲೆಯಲ್ಲಿ ಸಾರ್ವತ್ರಿಕ ಸೂಕ್ಷ್ಮಗಳನ್ನು ಎಳೆ ಎಳೆಯಾಗಿ ನಮ್ಮ ಮುಂದಿಡುವ

'ಬೆಟ್ಟದ ಜೀವ'ದಂತಹ ವಸ್ತುವನ್ನು ಅಲ್ಲಿನ ಸನ್ನಿವೇಶಗಳ ಹಿನ್ನೆಲೆಯಾಗಿಸಿಕೊಂಡು ಚರ್ಚಿಸುವ ಪ್ರಯತ್ನ ಈ ಲೇಖನದ ಮೂಲಕ ಮಾಡಲಾಗಿದೆ.

ಕಾರಂತರು ಕಥೆಯ ಚೆಲುವನ್ನು ಹೆಚ್ಚಿಸುವಲ್ಲಿ ಮಾತ್ರ ಆಸಕ್ತರಲ್ಲ. ಅವರ ಕಲಾ ಕುಸುರಿಯಲ್ಲಿ ತಂತ್ರ, ಚೆಲುವು, ರೋಚಕತೆಗಳು ದ್ವಿತೀಯ ದರ್ಜೆಯ ಚಿಂತನೆಗಳು. ಕಾದಂಬರಿಯಲ್ಲಿ ಬರುವ ಸಾಂದರ್ಭಿಕ ವಿವರಗಳ ಹಿಂದೆ ಯಾವಜ್ಜೀವನದ ಕಥನಗಳನ್ನು ಅನುಭವ ಪಾತಳಿಯಲ್ಲಿ ನಿಲ್ಲಿಸಿ ಸಂವಹನಕ್ಕೆ ಎಡೆಮಾಡಿಕೊಡುವುದು ಅವರ ಕಥಾ ಸಂವಿಧಾನದ ಅನೇಕ ಕಡೆಗಳಲ್ಲಿ ವ್ಯಕ್ತವಾಗುವ ಮುಖ್ಯ ಪರಿಯಾಗಿದೆ. ಬೆಟ್ಟದ ಜೀವದಂತಹ ಕಾದಂಬರಿಯಲ್ಲೂ ಅಷ್ಟೇ ಅಲ್ಲಿನ ಗೋಪಾಲಯ್ಯ, ಶಂಕರಿ, ನಾರಾಯಣಯ್ಯ, ಲಕ್ಷ್ಮೀ, ದೇರಣ್ಣಗೌಡ, ಶಂಭು, ಬಟ್ಯ ಹೀಗೆ ಯಾವುದೇ ಪಾತ್ರಗಳಾಗಲಿ ಅವು ಜೀವಿಸುವ ಸನ್ನಿವೇಶಗಳಾಗಲಿ ವಸ್ತುವಿಗೆ ತಕ್ಕಹಾಗೆ ಕುಣಿಯುತ್ತಿವೆ ಎಂದೋ, ಖಾಲಿ ವಿವರಗಳತ್ತಲೇ ಆಸಕ್ತಿ ತೋರುತ್ತಿವೆ ಎಂದಲ್ಲೋ ಕಾಣುವುದಿಲ್ಲ ಅವು ನಿತ್ಯ ವ್ಯಾಪಾರದಲ್ಲಿ ಆಗುಹೋಗುಗಳನ್ನು ತೀರಾ ಎಚ್ಚರಿಕೆಯಿಂದ ಗಮನಿಸುವಂತಹ ಸಾಹಿತ್ಯಕ ವಿವರಗಳಾಗಿ ಕಾಣದೆ ರೂಪ ರಹಿತ ಸಂವೇದನೆಗಳಾಗಿ ಕಾಣಿಸುತ್ತವೆ. ಇದಕ್ಕೆ ಪೂರಕವಾಗಿ ಈ ಸ್ಪಂದನೆಯನ್ನು ಸಾಕ್ಷಿಯಾಗಿ ಗ್ರಹಿಸುತ್ತಿರುವ ಶಿವರಾಮಯ್ಯನ ಪಾತ್ರ ಇಲ್ಲಿನ ಅನುವೇದನೆಗಳನ್ನು ತಲುಪಿಸುವಲ್ಲಿ ಗುರುತರವಾಗಿ ನಿಲ್ಲುತ್ತದೆ. ಪ್ರಕೃತಿಯ ವರ್ಣನೆಯೂ ಸಹ ಅಷ್ಟೇ ಕತೆಗೆ ಅನಿವಾರ್ಯವಾಗಿ ಮೇಳೈಸಿರುತ್ತದೆ. ಅಲ್ಲಿ ಅನಗತ್ಯವಾಗಿ ವರ್ಣನೆಗಳು ತಲೆದೋರಲು ಅವಕಾಶ ಕೊಡದೇ ಕತೆಯ ಓಘದಲ್ಲಿ ಅಲ್ಲಲ್ಲಿ ಅವುಗಳಿಗೆ ಅನುವು ಮಾಡಿಕೊಟ್ಟಿರುವುದು ಗಮನಾರ್ಹವಾದುದು. ಅದೇ ಕಾರಣವಾಗಿ ಪ್ರಾದೇಶಿಕ ಎಂದು ಕಾರಂತರೇ ಗುರುತಿಸುವ ಕಾದಂಬರಿ ಒಂದು, ಸಾರ್ವತ್ರಿಕವಾಗಿ ಮನ್ನಣೆಗೊಳ್ಳುವ ಜೀವನೋತ್ಸಾಹಗಳನ್ನು ಗರ್ಭೀಕರಿಸಿಕೊಂಡು ಅದರ ಹರಿವನ್ನು ಹೆಚ್ಚಿಸಿಕೊಂಡಿದೆ.

ಕೃತಿ ನಿರ್ಮಾಣದ ಹೊತ್ತಿನಲ್ಲಿ ಒಬ್ಬ ನಿರ್ಮಾತೃ ತನ್ನ ವೈಯಕ್ತಿಕ ಆಲೋಚನೆಗಳನ್ನು ಪಾತ್ರಗಳ ಮೇಲೆ ಪ್ರಭಾವಿಸಿ ನಿರೂಪಿಸುವ ಒಂದು ತಂತ್ರಕ್ಕೆ ತೆರೆದುಕೊಂಡಿರುತ್ತಾನೆ. ಸಾಮಾನ್ಯವಾಗಿ ಅವನ ಮನೋಪಟಲದಲ್ಲಿ ದಾಖಲಾಗುವ ತನ್ನ ತಿಳುವಳಿಕೆಗಳು, ತಳಮಳಗಳು, ಅರಸುವಿಕೆ, ಮಾನಸಿಕ ವಿವೇಚನೆ ಹೀಗೆ ಎಲ್ಲವನ್ನು ನಿರ್ದೇಶನಾತ್ಮಕವಾಗಿ ನಿರೂಪಿಸದಿದ್ದರೂ ಅವುಗಳ ಒಡನಾಟದಿಂದ ತನಗೆ ಸಿಕ್ಕ ಕಾಣ್ಕೆಗಳನ್ನು ಜಗತ್ತಿನೆದುರು ತೆರೆದಿಡುವ, ತನ್ನ ಕೆಲಸಗಳಲ್ಲಿ ಅವುಗಳನ್ನು ಅನ್ವಯಿಸಿಕೊಂಡು ಹೆಣೆಯುವ ವಿಚಾರ ಯಾವುದೇ ನಿರ್ಮಾತೃವಿಗೆ ಪ್ರಿಯವಾದುದೇ. ಕುವೆಂಪು ಅವರು ತಮ್ಮ ಬದುಕಿನ ಆದರ್ಶೀಕರಣದ ಪ್ರಭಾವಗಳನ್ನು ಕೆಲವು ಕಡೆಗಳಲ್ಲಿ ಅನಾಯಾಸವಾಗಿ ಬಿತ್ತರಿಸಿದ್ದಾರೆ. ಹೂವಯ್ಯನ ಪಾತ್ರ ಇಲ್ಲಿ ನೇರವಾಗಿ ಅಂತಹ ಪರಿಪ್ರೇಕ್ಷ್ಯಕ್ಕೆ ಒಳಗಾಗಬಲ್ಲದು. ಕಾರಂತರು ಇಲ್ಲಿ ಹಾಗೆ ನೇರ ವ್ಯಾಪಾರಕ್ಕೆ ಇಳಿಯದೆ ಜಾಗರೂಕರಾಗಿ ನಡೆದಿರುವಂತೆ ತೋರುತ್ತದೆ. ಅಂತೆಯೇ ಕಥಾ ಸಂವಿಧಾನ ಅಡಗಿಸಿಟ್ಟುಕೊಂಡ ಆಶಯದ ಪ್ರತಿರೂಪಗಳನ್ನು ಕಥಾ ವಿನ್ಯಾಸದಲ್ಲಿ ಒಂದು ಆದರ್ಶ ಎನಿಸದೆ ವಾಸ್ತವದ ಹೆಗಲಿಗೆ ಆತುಕೊಂಡಿರುವ ಹೊಣೆಗಾರಿಕೆ

ಎನ್ನುವಂತೆ ಮತ್ತು ಆ ಹೊಣೆಗಾರಿಕೆಯೇ ಒಂದು ಹೊರೆಯಾಗಿ ಉಳಿಯದಂತೆ ಜಾಗೃತರಾಗಿ ತಮ್ಮ ಅನೇಕ ಕೃತಿಗಳಲ್ಲಿ ಅವುಗಳನ್ನು ನೆಲೆಗೊಳಿಸಿದ್ದಾರೆ. ಹಾಗೆಂದ ಮಾತ್ರಕ್ಕೆ ಲೇಖಕನ ಕೃತಿ ಪ್ರಜ್ಞಾಪೂರ್ವಕ ಬರವಣಿಗೆ ಎಂಬುದಲ್ಲ, ಪ್ರಜ್ಞೆಯ ಒಂದೊಂದು ಎಳೆಗಳು ಅಲ್ಲಲ್ಲಿ ಮಿಳಿತವಾಗಿರುತ್ತವೆ. ಅದರ ಹೊರತಾದ ಕೃತಿ ನಿರ್ಮಾಣ ಕಷ್ಟಸಾಧ್ಯ.

ಜೀವ ಜಗತ್ತಿನ ಆಗುಹೋಗುಗಳು ತಮ್ಮ ಬದುಕಿನ ಖಾಸಾ ವ್ಯಾಪಾರವೇ ಎನ್ನುವಷ್ಟು ಅದರೊಟ್ಟಿಗಿನ ಸಾಹಚರ್ಯವನ್ನು 'ಬೆಟ್ಟದ ಜೀವ'ದಲ್ಲಿನ ಪಾತ್ರಗಳು ಅಲ್ಲಿನ ಸನ್ನಿವೇಶಗಳಲ್ಲಿ ಅನುವೇದಿಸುತ್ತವೆ. ಅಗಲಿದ ಮಗನನ್ನು ನೆನೆದು ಶಂಕರಿ ಪರವೂರಿನ ಶಿವರಾಮಯ್ಯನಲ್ಲಿ ದುಃಖ ತೋಡಿಕೊಳ್ಳುವಾಗ ಗೋಪಾಲಯ್ಯನವರು "ನಮ್ಮ ಲಕ್ಷ್ಮೀ ದನಕ್ಕೇನಾಯಿತು ನೆನ್ನೆ? ಅದನ್ನು ಹುಲಿ ಹಿಡಿದಂತೆ, ಅವನನ್ನೂ ಯಾವುದೋ ಹೆಣ್ಣು ಹುಲಿ ಹಿಡಿದಿರಬೇಕು" ಎಂದು ಹೆಣ್ಣಿನ ಆಸೆ ತನ್ನ ಮಗನನ್ನು ನಮ್ಮಿಂದ ಕಸಿಯಿತು ಎನ್ನುವುದನ್ನು ಹುಲಿ ಹಿಡಿಯಿತು ಎಂದು ಸಾಮಾಜಿಕ ನಡವಳಿಕೆಗಳನ್ನು ಸುತ್ತಣ ಪರಿಸರದೊಟ್ಟಿಗೆ ಹೋಲಿಸಿ ಮಾತನಾಡುವಾಗ, ಇನ್ನೊಂದು ಸನ್ನಿವೇಶದಲ್ಲಿ ನಾರಾಯಣ ತನ್ನ ಮದುವೆ ಗಳಿಗೆ ಕುರಿತು ಮಾತನಾಡುವಾಗ "ದೇರಣ್ಣ ಆಗ ಚೇಷ್ಟೆ ಮಾಡುತ್ತ ಅಯ್ಯಾ, ನಮ್ಮ ನಾರಾಯಣಯ್ಯ ಕರ್ಪಿನಲ್ಲಿ ಬಿದ್ದ ಆನೆಯ ಹಾಗೆ- ಅಲ್ಲವೇ? ಕರ್ಪಿನಿಂದ ಏಳುವ ಹಾಗೆಯೇ ಇಲ್ಲ. ಮದುವೆಗಿಂತಲೂ ದೊಡ್ಡ ಕರ್ಪು ಬೇರೊಂದಿಲ್ಲ, ಅಲ್ಲವೇ?" ಎನ್ನುವಲ್ಲಿ ಕಾಟ ಕೊಡುವ ಆನೆಗಳನ್ನು ಖೆಡ್ಡಕ್ಕೆ ಹಾಕುವ ಕರ್ಪನ್ನು ಮದುವೆಗೆ ಹೋಲಿಸುವ ಅವರ ಸಮೀಕರಣಗಳನ್ನು ನೋಡಿದರೆ ಕಥಾ ವಸ್ತುವಿನ ಸನ್ನಿವೇಶದಲ್ಲಿ ಸುತ್ತಣ ಜಗತ್ತು ನಿತ್ಯ ಬದುಕಿನಲ್ಲಿ ಎಷ್ಟು ಹಾಸುಹೊಕ್ಕಾಗಿತ್ತು; ಅದರೆಡೆಗೆ ಅವರ ನಿಲುವುಗಳು ಹೀಗೆ ವ್ಯಂಗ್ಯಾತ್ಮಕವಾಗಿ ಸಾಮಾಜೀಕರಣಗೊಳಿಸುವ ರೀತಿಯನ್ನು ಗಮನಿಸಿದಾಗ, ಕಥೆಯ ವಿಶ್ವದಲ್ಲಿ ಇಂತಹ ಸ್ವರೂಪವಿರುವುದು ಸಾಮಾನ್ಯ ಮತ್ತು ಅವೆಲ್ಲವೂ ವಾಸ್ತವಕ್ಕೆ ಸಮೀಪ ಎನ್ನುವುದನ್ನು ಮಗದೊಮ್ಮೆ ವೇದಿಸುತ್ತವೆ. ಅಂತಹ ಸಣ್ಣಪುಟ್ಟ ಸಂಭಾಷಣೆಗಳ ಮೂಲಕ ಅಲ್ಲಿನ ಜನರ ಜೀವಜಗತ್ತಿನ ಪರ–ವಿರೋಧವಾದ ತಿಳುವಳಿಕೆಗಳು ನಮ್ಮ ನಗರ ನಾಗರಿಕತೆಯ ಬಳುವಳಿಯಿಂದ ಹುಟ್ಟಿದವುಗಳಲ್ಲ, ಅವಕ್ಕೆ ಅದರದೇ ಆದ ಸ್ವಂತ ಅನುಭವ ಬೆನ್ನಿಗಿದ್ದು ಅದನ್ನು ನಗರದ ಮಾಪನಗಳಲ್ಲಿ ಅಳೆದು ಅದನ್ನು ರೊಮ್ಯಾಂಟಿಸೈಸ್ ಅಥವಾ ಮೌಲ್ಯಮಾಪನ ಮಾಡುತ್ತಿಲ್ಲವೆಂಬುದನ್ನು ಇನ್ನೂ ಸ್ಪಷ್ಟವಾಗಿಸುವುದು ಅಲ್ಲಿನ ಜೀವಂತ ಪಾತ್ರವೆ ಆದ ನಿರೂಪಕನ ನೋಟದ ಮೂಲಕ. ಇಲ್ಲಿನ ನಿರೂಪಕ ಶಿವರಾಮಯ್ಯ ಅಲ್ಲಿನ ಜಗತ್ತಿನ ಜೊತೆಗೆ ತಾದಾತ್ಮ್ಯವನ್ನು ಹೊಂದದೆ, ಅಲ್ಲಿನ ಪರ ವಿರೋಧಗಳನ್ನು ಕಟ್ಟಿಕೊಳ್ಳದೆ ಒಂದು ಜೀವಂತವೂ ನಿರ್ಲಿಪ್ತವೂ ಎರಡೂ ಆಗಿರುವ ಒಂದು ವಿಶಿಷ್ಟ ಸನ್ನಿವೇಶದಲ್ಲಿ ನಿಲ್ಲುತ್ತಾನೆ.

ಇದನ್ನು ಮತ್ತಷ್ಟು ಪುಷ್ಟೀಕರಿಸುವಂತೆ ಡಾ. ಜಿ. ಎಸ್. ಆಮೂರ ಅವರು ಹೇಳುವ ಮಾತು ಹೀಗಿದೆ, "ಕಾಲಗತಿಯ ಸೂಚನೆ ಇಂಥ ಕಾರ್ಯಗಳನ್ನು ಬಿಟ್ಟರೆ, ನಿರೂಪಕ ಘಟನೆ- ಸಂಭಾಷಣೆಗಳಲ್ಲಿ ಕರಗಿಹೋಗುತ್ತಾನೆ. ಪುಟ್ಟಪ್ಪನವರ

ಕಾದಂಬರಿಗಳ ನಿರೂಪಕರಿಗೆ ಹೋಲಿಸಿದರೆ ವೈಚಾರಿಕತೆಯಲ್ಲಾಗಲಿ, ಶೈಲಿಯಲ್ಲಾಗಲಿ ಕಾದಂಬರಿಯ ವಾಸ್ತವಕ್ಕಿಂತ ಭಿನ್ನವಾದ ಸ್ತರವನ್ನು ಅವನು ಪ್ರತಿನಿಧಿಸುವುದಿಲ್ಲ'' ಇಲ್ಲಿ ಆಮೂರವರು ನಿರೂಪಕ ಶಿವರಾಮಯ್ಯನು ನಡೆಸಿಕೊಡುವ ಹೊಣೆಗಾರಿಕೆಯ ಸೂಕ್ಷ್ಮತೆಯು ವಾಸ್ತವವನ್ನು ಮೀರುವುದಿಲ್ಲ ಎನ್ನುವ ಮೂಲಕ ಕತೆಯ ಸಂವಿಧಾನವು ಸಹ ಅದಕ್ಕೆ ಎಡೆ ಮಾಡಿಕೊಡಲಾರದು ಎಂಬುದನ್ನು ಸ್ಪಷ್ಟ ಮಾಡುತ್ತಾರೆ. ಈ ಮಾತನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಾರಂತರು ಕಾದಂಬರಿಯ ಉದ್ದಕ್ಕೂ ನಿವೇದಿಸಿದ ಪರಿಸರದ ವೃತ್ತಾಂತಗಳೆಲ್ಲ ಸಮಾಜ ನಿರ್ಮಿಸಿದ ಆದರ್ಶಗಳ ಮೇಲೆ ನಿಂತ ಕಾಳಜಿಗಳಾಗಿ ಕಾಣದೆ ಇವು ಅಲ್ಲಿನ ಜೀವನದ ವ್ಯಕ್ತಿತಃ ಹುಟ್ಟಿಕೊಂಡ ಸಹಬಾಳ್ವೆಯ ವಿವೇಚನೆಗಳು; ಆ ವಾಸ್ತವಾಂಶವನ್ನು ಕಾರಂತರು ಮರೆಯದೆ ಈ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಮಾನವ ಇಲ್ಲಿ ನಿಸರ್ಗದೊಟ್ಟಿಗೆ ನಡೆಸುತ್ತಿರುವ ಕ್ರಿಯಾಶೀಲ ಹೋರಾಟ, ಒಡನಾಟದ ಸಂಕೇತವಾಗಿ ಗೋಪಾಲಯ್ಯ ನಿಂತುಕೊಂಡರೆ ಆ ಹೋರಾಟ, ಗಾಢ ಒಡನಾಟದ ಪ್ರತ್ಯಕ್ಷದರ್ಶಿಯಾಗಿ ಹೊಸ ವಿಶ್ವದ ಪ್ರತಿನಿಧಿಯೆನ್ನುವಂತೆ ಶಿವರಾಮಯ್ಯ ನಿಲ್ಲುತ್ತಾನೆ. ಒಂದು ಅರ್ಥದಲ್ಲಿ ಅವನು ಸಹೃದಯರ ಸಂವೇದನಾ ಎಳೆಯೂ ಹೌದು. ಆ ಹೋರಾಟದ, ಒಡನಾಟದ ಸ್ವರೂಪ ಮತ್ತು ಅರ್ಥವನ್ನು ಅರಿತುಕೊಳ್ಳಲು ಶಿವರಾಮಯ್ಯ ಸಹಜ ಪ್ರಯತ್ನದ ಸಂಕೇತವಾಗಿ ನಿಲ್ಲುತ್ತಾನೆ. ಕಾದಂಬರಿಯ ಕಥಾವಸ್ತು ಒಟ್ಟಾರೆಯಾಗಿ ರೂಪನಿರ್ದಿಷ್ಟ ನಿರೂಪಣೆಯಲ್ಲದಿದ್ದರೂ ಅದನ್ನು ಕಾಣುವ ಬೇರೊಂದು ವಿಶ್ವಕ್ಕೆ ಅಲ್ಲಿನ ದೃಷ್ಟಿಕೋನಗಳಲ್ಲಿರುವ ರೂಪರಹಿತ ವಸ್ತುವನ್ನು ನಿರೂಪಕನಾಗಿ ತಲುಪಿಸುವ ಹೊಣೆಗಾರಿಕೆಯನ್ನು ಶಿವರಾಮಯ್ಯನ ಪಾತ್ರ ಹೊತ್ತಿದೆ.

``ಮರುಳು ನಿನಗೆ ನಾರಾಯಣ. ದುಡ್ಡನ್ನು ಯಾವ ಮನುಷ್ಯನೂ ಕಟ್ಟಿಕೊಂಡು ಹೋಗುವುದಿಲ್ಲ. ದುಡ್ಡು ಕಳೆದರೇನಾಯಿತಂತೆ? ಈ ತೋಟಕ್ಕಾಗಿ ದುಡಿದವರಿಗೆ ಪ್ರಯೋಜನವಾಗಲಿಲ್ಲವೇ? ನಾನು ಹೋದ ಮೇಲೆಯೂ ಉಳಿಯುವ ಈ ತೋಟ, ಯಾರಿಗೂ ಕೆಲಸಕ್ಕೆ ಬಾರದೇ ಹೋಯಿತೇ? ಅದು ಬರಲಿಲ್ಲವೆಂದೇ ತಿಳಿಯುವ, ಇಲ್ಲಿರುವಷ್ಟು ದಿವಸ ಈ ಸೊಂಪಾದ ಸಸಿಗಳನ್ನು ಕಂಡು ನಾವು ಸಂತೋಷಪಟ್ಟಿದ್ದು ಸುಳ್ಳಾದೀತೆ? ಹಣ ಹೋಯಿತೆಲ್ಲಿಗೆ? ಅದು ಹಾಳಾಗುವುದು ಹೇಗೆ? ಅದರಿಂದ ನೂರು ಬಾಯಿಗಳು ನಾಲ್ಕೈದು ವರ್ಷ ಅನ್ನ ಉಂಡದ್ದು ಸುಳ್ಳೇ ಎನ್ನುತ್ತಾರೆ'' ಹೀಗೆ ಹೇಳುವ ಗೋಪಾಲಯ್ಯನ ಮಾತುಗಳು ಸಹಜವಾಗಿ ಒಂದು ಶಾಂತ ನೋಟದಿಂದ ಸಂವೇದನೆಗೊಳ್ಳುತ್ತಿರುವ ಹಂತವನ್ನು ತೋರುತ್ತದೆ. ಅಷ್ಟು ವರುಷಗಳ ಕಾಲ ನಿಸರ್ಗದೊಟ್ಟಿಗೆ ಹೋರಾಡಿ ಬದುಕು ಕಟ್ಟಿಕೊಂಡ ಆಳ್ತನಕ್ಕೆ ಪ್ರಕೃತಿ ಒಡ್ಡುವ ಸವಾಲುಗಳ ಕುರಿತು ಇಷ್ಟು ಆವೇಶರಹಿತ ಆಲೋಚನೆಯ ಲಹರಿ ನಿಜವಾಗಿಯೂ ಬರಲು ಸಾಧ್ಯವೇ? ಎನ್ನುವ ಪ್ರಶ್ನೆ ಎದುರಾಗುತ್ತದೆ. ಆಗ ಕಥಾವಸ್ತು ನಿಜವಾಗಿಯೂ ರೂಪ ರಹಿತವಾಗಿದೆಯೋ? ರೂಪ ನಿರ್ದಿಷ್ಟ ಎಳೆಗಳನ್ನೇ ಹೊತ್ತಿದೆಯೋ? ಎಂದು ಸಂದೇಹ ಶುರುವಾಗುತ್ತದೆ ಆದರೆ ಈ ಅಪಾಯವನ್ನು ತಪ್ಪಿಸಿ ಅದು ವಾಸ್ತವಿಕ ಬದುಕಿನ ಪಡಿಯಚ್ಚಿನಿಂದಲೇ ಒಡಮೂಡಿದಂತಹ ಸನ್ನಿವೇಶ ಇದ್ದಿರಬೇಕು ಎಂಬ

ನಿರ್ಧಾರಕ್ಕೆ ಬರುವಂತೆ ಮಾಡಲು ನಿರೂಪಕನ ಪಾತ್ರ ಅನುಕೂಲ ಒದಗಿಸುತ್ತದೆ. ಗೋಪಾಲಯ್ಯ ಮತ್ತು ಕಾಟುಮೂಲೆಯ ಪ್ರಪಂಚಕ್ಕೆ ನಗರ ಪ್ರಪಂಚದ ಪ್ರತಿನಿಧಿಯಾಗಿ ಹೊರಟ ಶಿವರಾಮಯ್ಯನ ಭೇಟಿಯಿಂದಲೇ ಗೋಪಾಲಯ್ಯನ ಬದುಕಿನ ಬಾಕಿ ವಿವರಗಳೆಲ್ಲಾ ಹೊರ ಪ್ರಪಂಚಕ್ಕೆ ಪರಿಚಯವಾಗಲು ಸಾಧ್ಯವಾಗುತ್ತದೆ. ಅದರೊಟ್ಟಿಗೆ ಶಿವರಾಮಯ್ಯನ ಸಹಾನುಭೂತಿ, ಸಹಜ ಕುತೂಹಲದಿಂದಾಗಿ ಗೋಪಾಲಯ್ಯನ ಜೀವನ ಚಿತ್ರಣ ಮೇಲ್ನೋಟಕ್ಕೆ ಕಂಡಂತೆ ಪ್ರಜ್ಞೆಯಿಂದ ರಚನೆಗೊಂಡ ರೂಪವನ್ನು ತಳೆದಿಲ್ಲ ಎಂಬುದು ವೇದ್ಯವಾಗುತ್ತದೆ. ಆ ಮೂಲಕ ಇಂತಹ ಪ್ರಕೃತಿ ಒಡನಾಡಿಗಳಲ್ಲಿ ಸಹಜವಾಗಿ ಬೇರೂರಲು ಅನುವಾಗುವ ಜೀವಪರ ದೃಷ್ಟಿಕೋನದ ಕಾಳಜಿಗಳ ಹಿಂದಿರುವ ಪ್ರಭಾವ, ಗಾಢ ಸಾಹಚರ್ಯ ಸಿಕ್ಕು ಅದರ ಚಿತ್ರಣವು ತೆರೆದುಕೊಳ್ಳುತ್ತದೆ.

ಬದುಕಿನ ನಿಜವಾದ ಅರ್ಥವನ್ನು ಹುಡುಕುವ ಆಯಾಮದಲ್ಲಿ ಈ ಕಾದಂಬರಿಯ ಕಥಾವಸ್ತುವನ್ನು ನೋಡಬೇಕಿದೆ. ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳಲ್ಲಿ ಉಂಟಾಗುತ್ತಿರುವ ಮಾನಸಿಕ ಕಂದರಗಳಿಂದಾಗಿ ಪೇಟೆಯ ನಾಗರಿಕತೆ ಪ್ರಕೃತಿಯನ್ನು ಕಾಣುವ ನೋಟವೇ ಭಿನ್ನವಾಗುತ್ತಿದೆ. ತಮ್ಮ ಸುಖಲೋಲುಪತೆಗಳಿಗೆ; ನಗರ ಹುಟ್ಟಿಸುವ ಏಕತಾನತೆಯಿಂದ ಬಿಡಿಸಿಕೊಂಡು ನಾಲ್ಕು ದಿನ ನಿರುಮ್ಮಳವಾಗುವ ಉಪಭೋಗಕ್ಕೆ ಮಾತ್ರ ಪ್ರಕೃತಿಯನ್ನು ಸೀಮಿತಗೊಳಿಸುತ್ತಿರುವ ಸನ್ನಿವೇಶದಲ್ಲಿ, ಅದೇ ನಾಲ್ಕು ದಿನದ ನಿರಾಳತೆ ಬದುಕಿನುದ್ದಕ್ಕೂ ಅನುವಾಗಲು ತೋರಬೇಕಾದ ಪ್ರಕೃತಿಯೊಡಗಿನ ಸಂಘರ್ಷದ ನಡುವೆಯೂ ಉಳಿಯುವ ಸೂಕ್ಷ್ಮ ಸಂಬಂಧ ಇಂದಿನ ಆಧುನಿಕತೆಗೆ ಸ್ವಲ್ಪ ದುಬಾರಿಯೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹುಟ್ಟುವ ಆಧುನಿಕತೆಯ ತುಮುಲಗಳು ಶಂಭುವಿನ ಪಾತ್ರದ ಮೂಲಕ ಜೀವಿಸಿವೆ. ಪೇಟೆಯ ನೋಟ ಭಿನ್ನವಾಗುತ್ತಿದೆ ಎಂದ ಮಾತ್ರಕ್ಕೆ ಹಳ್ಳಿಯ ಬಾಳು ಸಂಪನ್ನ-ಪೇಟೆಯದ್ದು ನಿಷ್ಫಲ ಎಂಬುದಾಗಿ ನಿರ್ಣಯಿಸುವ ಸಂವಹನವೂ ಇದಲ್ಲ. ಕಾರಂತರು ತಮ್ಮ ಕಾದಂಬರಿಯಲ್ಲಿ ಈ ನಿರ್ಣಯಕ್ಕೆ ಹೋಗಿಲ್ಲ. ಇಲ್ಲಿಯೂ ಅದರ ಅಪಾಯವನ್ನು ತಪ್ಪಿಸಲು ಕಾದಂಬರಿಯ ಅನೇಕ ಸಂಭಾಷಣೆಗಳಲ್ಲಿ ಪ್ರಯತ್ನಿಸಿದಂತೆ ಸ್ಪಷ್ಟವಾಗುತ್ತದೆ. ಶಿವರಾಮ ನಗರದ ಶಿಕ್ಷಣ ಮತ್ತು ಸಿದ್ಧಾಂತಗಳನ್ನು ಹೊತ್ತು ಬಂದಿದ್ದರೂ ಅವನು ಗೋಪಾಲಯ್ಯನ ಕಠಿಣ ಶ್ರಮ, ನಿಸರ್ಗದೊಂದಿಗಿನ ಹೋರಾಟ ಮತ್ತು ಅವರ ಕಾಣೆಯಾದ ಮಗ ಶಂಭುವಿನ ಮೌನ ನೋವನ್ನು ತನ್ನದೇ ಆದ ವೈಚಾರಿಕ ಒಳನೋಟಗಳಿಂದ (Subjective Lens) ವಿಶ್ಲೇಷಿಸುತ್ತಾನೆಯೇ ಹೊರತು ನಿರ್ಣಯಕ್ಕೆ ನಿಲ್ಲುವುದಿಲ್ಲ.

ಪ್ರಕೃತಿಯ ಜೊತೆಗೆ ಒಡನಾಟವೇನೋ ಸರಿ ಆದರೆ ನಿಮಗೆ ಮನುಷ್ಯರ ಒಡನಾಟ ಹೆಚ್ಚು ಬೇಕೆನಿಸುವುದಿಲ್ಲವೇ ಎಂದು ಶಿವರಾಮಯ್ಯ ಕೇಳುವಾಗ ಗೋಪಾಲಯ್ಯ, ಬೇಸರ ಬರುತ್ತದೆ, ಹೋಗುತ್ತದೆ ನಿತ್ಯದ ಕೆಲಸ, ಓಡಾಟಗಳಲ್ಲಿ ಅದೊಂದು ಕಾಣುವುದಿಲ್ಲ ಎಂದ ಉತ್ತರಕ್ಕೆ ಪ್ರತಿಯಾಗಿ ಶಿವರಾಮಯ್ಯ "ಅಂತೂ ಸರಿಯೇ; ಪ್ರಾಯಶಃ ಪೇಟೆಯಲ್ಲಿ ಬೆಳೆದ ನನ್ನಂಥವರಿಗೆ ಹಾಗೆನ್ನಿಸುತ್ತಿರಬೇಕು.

ಕೊನೆಗೆ– ಎಲ್ಲವೂ ಅಭ್ಯಾಸವಾದ ಹಾಗೆ ಅಲ್ಲವೇ? ಆದರೆ ಇಷ್ಟು ಮಾತ್ರ ನಿಜ, ನನ್ನಂಥವನು ತಿಂಗಳಿಗೆ ನೂರು ರೂಪಾಯಿ ಕೊಡುತ್ತೇನೆಂದರೂ, ಇಲ್ಲಿಯೇ ಇದ್ದು ಆರು ತಿಂಗಳ ಸಮಯವನ್ನು ಕಳೆಯಲಾರ.” ಎನ್ನುತ್ತಾನೆ, ಈ ಸಂಭಾಷಣೆಯ ಮುಖೇನ ಮತ್ತೊಂದು ಜಾಗ ಸ್ವರ್ಗವಾಗಿ ಕಂಡರೂ ಅಲ್ಲಿ ಅಸ್ತಿತ್ವ ಕಂಡುಕೊಳ್ಳುವ ಹೋರಾಟ ಅದರಲ್ಲೂ ತನ್ನಂತಹ ಅತಿಥಿ ಜನಕ್ಕೆ ಅಸಾಮಾನ್ಯವಾದುದು ಎಂಬುದರ ಸಾಮಾನ್ಯ ಅರಿವನ್ನು ತೋರುತ್ತಾ; ಅಲ್ಲಿನ ಜೀವಗಳಿಗೆ ‘ಬೇಸರ’ ಎನ್ನುವ ಪ್ರಶ್ನೆಯೆ ದೊಡ್ಡದಾಗದೆ ಇರುವಷ್ಟು ಅಲ್ಲಿನ ಸಾಚಾತನವನ್ನು ಪರಿಚಯಿಸುತ್ತಾರೆ ಲೇಖಕರು. ಅಲ್ಲಿ ಈಗಾಗಲೇ ಪರಿಚಯವಾಗುತ್ತಿರುವ ವಿಶ್ವಕ್ಕೆ ನಾವು ಅನ್ಯರಲ್ಲ ಅನ್ನುವುದನ್ನು ಮನದಟ್ಟು ಮಾಡುತ್ತಲೇ ಅಲ್ಲಿನ ಬಾಳ್ವೆ ಸಾಮಾನ್ಯವೂ ಅಲ್ಲ ಎಂಬ ಅರಿವನ್ನು ಸಹೃದಯರಲ್ಲಿ ಬಿತ್ತುತ್ತಾರೆ.

ಕಾರಂತರು ಹಳ್ಳಿ ಮತ್ತು ಪೇಟೆಯ ಎರಡು ಬಾಳನ್ನು ತದೇಕಚಿತ್ತರಾಗಿ ಕಂಡುಂಡು ಎರಡೂ ಕಡೆಗಳಲ್ಲಿ ಇರುವ ಒಂದಷ್ಟು ಸಾಮಾಜಿಕ ಹಿನ್ನೆಲೆಗಳ ಅನಿವಾರ್ಯತೆಯನ್ನು ಗುರುತಿಸಿಕೊಂಡಿದ್ದಾರೆ. ಅದರ ಸೂಕ್ಷ್ಮವನ್ನು ಗಟ್ಟಿಯಾಗಿ ಹೇಳದೆ ಸುಪ್ತವಾಗಿ ಕಾಣಿಸುವ ಪ್ರಯತ್ನಕ್ಕೆ ತೊಡಗುತ್ತಾರೆ. ಅದರೊಟ್ಟಿಗೆ ಆ ಸೂಕ್ಷ್ಮದೆಡೆಗೆ ಇರಬೇಕಾದ ಸಹಾನುಭೂತಿಯ ಸ್ವರೂಪವನ್ನು ನಿರ್ದಿಷ್ಟವಾಗಿ ಹೇಳದೆ ಸ್ಥಾಪಿಸುವ ಶೈಲಿ ಇಲ್ಲಿ ಮನೋಜ್ಞವಾಗುತ್ತದೆ. ಇಲ್ಲಿ ಮತ್ತೊಂದು ಪ್ರಶ್ನೆಯನ್ನು ಸೂಕ್ಷ್ಮವಾಗಿ ಗಮನಿಸಬೇಕಿದೆ ಸಮಾಜದ ಆಧುನೀಕರಣದ ಪ್ರಕ್ರಿಯೆಯ ಸಂದರ್ಭದಲ್ಲಿ ಕಾರಂತರು ತಮ್ಮ ಕೃತಿಗಳಲ್ಲಿ ಪ್ರತಿಕ್ರಿಯೆ ಏನು? ಎಂಬುದು ಡಾ. ಯಶೋಧಾ ರಾಜೇಂದ್ರ ಎನ್ನುವ ಸಂಶೋಧಕರೊಬ್ಬರು ಇದನ್ನೇ ಒಂದು ಲೇಖನದಲ್ಲಿ ಪ್ರಸ್ತಾಪಿಸುತ್ತಾ “ಕಾರಂತರ ಕಾದಂಬರಿಗಳಲ್ಲಿ ಕಾಣುವ ಸಮಾಜದ ಆಧುನೀಕರಣ ಪ್ರಕ್ರಿಯೆಯಲ್ಲಿ ಹಳೆಯ ಸಮಾಜ, ಸಂಪ್ರದಾಯಗಳ ವಿಘಟನೆಯ ಹೊತ್ತಿನಲ್ಲಿ ಸಾಂಪ್ರದಾಯಿಕ ಜಗತ್ತಿನ ಬಗೆಗೆ ಪ್ರಕಟಗೊಳ್ಳುವ ಸೆಳೆತ ಕುವೆಂಪು ಕಾದಂಬರಿಗಳಲ್ಲಿ ಇಲ್ಲ. ಹಳೆಯ ಜಗತ್ತಿನ ಗರ್ಭದಲ್ಲಿ ಹೊಸ ಜಗತ್ತಿನ ಹುಟ್ಟು ಆಗುವಾಗ ಹಳೆಯ ಸಾಮಾಜಿಕ ಶಕ್ತಿಗಳು ವಿಘಟನೆಗೊಳ್ಳುವುದರ ಬಗೆಗೆ ಕುವೆಂಪು ಕಾದಂಬರಿಗಳಲ್ಲಿ ಆಶ್ಚರ್ಯವೆನ್ನುವಷ್ಟು ಯಾವ ಖೇದದ ಧ್ವನಿಯೂ ಪ್ರಕಟಗೊಳ್ಳುವುದಿಲ್ಲ. ಆದರೆ ಹಳೆಯ ಜಗತ್ತು ಅಲ್ಲಿ ತನ್ನೆಲ್ಲಾ ಶಕ್ತಿಗಳೊಂದಿಗೆ ಅವತರಿಸಿದೆ.” ಎನ್ನುತ್ತಾರೆ. ಬೆಟ್ಟದ ಜೀವ, ಚಿಗುರಿದ ಕನಸು ಮತ್ತು ಮರಳಿ ಮಣ್ಣಿಗೆಯಲ್ಲಿ ಕೃಷಿ ನಿಷ್ಠತೆಯ ಕುರಿತಾಗಿ ಅಲ್ಲಿನ ನಿರೂಪಣೆ ತೋರುವ ತಾದಾತ್ಮ್ಯಗಳನ್ನು ಗುರಿಯಾಗಿಸಿಕೊಂಡು ಅವರು ಅಭಿಪ್ರಾಯಪಟ್ಟಿದ್ದಾರೆ. ಅವರ ಅಭಿಪ್ರಾಯದಲ್ಲಿ ದ್ವಂದ್ವಗಳು ಕಾಣುತ್ತವೆ; ಸಂಪ್ರದಾಯದ ವಿಘಟನೆಯ ಹೊತ್ತಿನಲ್ಲಿ ಸಾಂಪ್ರದಾಯಿಕ ಜಗತ್ತಿನ ಕುರಿತಾಗಿ ಕುವೆಂಪು ಅವರಿಗೆ ಯಾವ ಖೇದವೂ ಇಲ್ಲ ಎನ್ನುವಲ್ಲಿ ಯಾಕೆ ಖೇದವಿಲ್ಲ? ಎನ್ನುವುದನ್ನು ಕಾಣಬೇಕಾದ ಅಗತ್ಯವೂ ಇದೆ. ಕುವೆಂಪುರವರ ‘ಕಾನೂರು ಸುಬ್ಬಮ್ಮ ಹೆಗ್ಗಡತಿ’ ಕಾದಂಬರಿಯಲ್ಲಿ ಬರುವ ಹೂವಯ್ಯ ವಾಸ್ತವಿಕತೆಯ ನೆಲದಲ್ಲೂ ಆದರ್ಶದ ಪರ್ವತವೇ ನಿಂತಂತೆ ಭಾಸವಾಗುವ ಪಾತ್ರ.

ಅದು ಆಧ್ಯಾತ್ಮಿಕತೆ ಆವರಣದಲ್ಲಿ ಅರಿವು ಪಡೆದು ಹಳೆಯ ಪದ್ಧತಿಗಳನ್ನು ಪುನರ್ ವಿಮರ್ಶಿಸುವ ಸುಧಾರಣಾ ಪ್ರವೃತ್ತಿ ಮೈಗೂಡಿಸಿಕೊಂಡ ಮನೋಧರ್ಮವಿದ್ದು, ಅಲ್ಲಿ ನಿತ್ಯ ಜೀವನದ ಆಗುಹೋಗುಗಳ ಮೂಲಕ ಜೀವತಳೆಯುವ ಸಾವಯವ ಸಂಬಂಧದ ಎಳೆಯೊಂದು ಬಿಟ್ಟುಹೋಗಿದೆ. ಅದನ್ನೇ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರು 'ಆಧುನಿಕ ಕನ್ನಡ ಸಾಹಿತ್ಯ ನಡೆದು ಬಂದ ದಾರಿ' ಕೃತಿಯಲ್ಲಿ ಮಾತನಾಡುತ್ತಾ "ಗ್ರಾಮ ಜೀವನದ ಮೌಲ್ಯಗಳು, ನಂಬಿಕೆಗಳನ್ನು ಮೂರ್ತವಾಗಿ ಪ್ರಕಟಿಸಬಲ್ಲ ಪುನರ್‌ಸೃಷ್ಟಿ ಇಲ್ಲಿದೆ. ಒಂದಿಗೇ ಹೂವಯ್ಯನ ಪಾತ್ರದಲ್ಲಿ, ಈ ಜೀವನದಲ್ಲಿ ಎತ್ತರಕ್ಕೆ ಬೆಳೆಯುವ ಪರಿಪೂರ್ಣತೆ ಇದೆ. ಆದರೆ ಇವೆರಡೂ ಜೈವಿಕವಾಗಿ ಸೇರಿಕೊಳ್ಳದಿರುವುದು, ಹೂವಯ್ಯನೊಡನೆ ಕಾದಂಬರಿಕಾರ ತಾದಾತ್ಮ್ಯ, ಇವುಗಳಿಂದ ಕಾದಂಬರಿ ಬದುಕಿನ ನಿಚ್ಚಳ ನೋಟದ ಗ್ರಹಿಕೆಯಾಗದೆ ಹೋಗುತ್ತದೆ." ಎನ್ನುತ್ತಾರೆ. ಈ ವಿಶ್ಲೇಷಣೆಯೂ ಮೇಲೆ ಎತ್ತಿಕೊಂಡ ಖೇದವಿಲ್ಲವೇಕೆ? ಎನ್ನುವ ಪ್ರಶ್ನೆಗೆ ಸಮಂಜಸ ಉತ್ತರ ನೀಡಬಲ್ಲದು. ಕುವೆಂಪು ಅವರ ಕಾದಂಬರಿಗಳಲ್ಲಿ ಸಂಪ್ರದಾಯದ ವಿಘಟನೆಯ ಸಂದರ್ಭದಲ್ಲಿ ತೋರುವ ಒಂದು ಖೇದವಿಲ್ಲದ ನಿರ್ಲಕ್ಷ್ಯದ ಹಿಂದೆ ಯಾವುದನ್ನು ನಿರ್ಲಕ್ಷಿಸುತ್ತಿದ್ದಾರೋ ಅದರೆಡೆಗೆ ಒಂದು ಹದವಾದ ತಾದಾತ್ಮ್ಯವಿದೆ. ಆದರೆ ಕಾರಂತರ ಇಂತಹ ವಾಸ್ತವಿಕ ಕಥಾ ನಿರೂಪಣೆಗಳಲ್ಲಿ ಆದರ್ಶ ಎಂಬುದು ಏಕವ್ಯಕ್ತಿಯ ಗಳಿಕೆಯದ್ದು ಎಂಬಂತಾಗದೆ ಸಮಷ್ಟಿಯ ಜೀವನ ವ್ಯಾಪಾರದಿಂದ ಜನಿಸುವಂತೆ ಭಾಸವಾಗುತ್ತದೆ. ನಿರ್ಣಾಯಕ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ತೋರುವ ಪಂಚಾಯಿತಿಯಾಗದೆ ಅದು ಹತ್ತಾರು ಪಾತ್ರಗಳಿಂದ, ಹತ್ತಾರು ಜೀವಗಳ ಅನುಭವದಿಂದ ಬೆರೆತು ಅವುಗಳ ಕತೆಗಳ ಮೂಲಕ ಉಸಿರಾಡುವ ಸನ್ನಿವೇಶಗಳಲ್ಲಿ ಹಸನಾಗಿ ಬೀಜ ಬಿತ್ತಿದಂತೆ ತೋರುತ್ತದೆ. ಆಗ ಲೇಖಕನ ವೈಯಕ್ತಿಕ ಪ್ರಭಾವದಿಂದಲೂ ದೂರ ಉಳಿದು ನಿಲ್ಲಲು ಕಥಾ ಹರಿವಿಗೂ ಅನುಕೂಲವಾಗಿ ಅದು ಸಹೃದಯರನ್ನು ಅವರದ್ದೇ ಚಿಂತನೆಯ ಮಾದರಿಗಳ ಮೂಲಕ ಪ್ರವೇಶಿಸಿ ಕಲಾನುಭವ ನೀಡುವುದು. ರೂಪ ನಿರ್ದಿಷ್ಟತೆಗೆ ಕಟ್ಟು ಬೀಳದೆ ಕಾರಂತರು ಕಾದಂಬರಿಯನ್ನು ನಿರೂಪಿಸಲು ಇಂತಹ ನೋಟಗಳು ಪೂರಕ ಹಿನ್ನೆಲೆ ಒದಗಿಸಿವೆ.

ಹಾಗೆಂದು ಕಾದಂಬರಿಯನ್ನು Dramatize ಮಾಡುವುದು ತಪ್ಪೇ? ಎಂಬ ಪ್ರಶ್ನೆಯನ್ನು ಎತ್ತಿಕೊಂಡರೆ; ಬದುಕಿನ ನಿಜವಾದ ಅರ್ಥವನ್ನು ಶೋಧಿಸುವಂತೆ ಕಾಣುವ ಇಂತಹ ಕಥಾವಸ್ತುವು ಕೊಡಬಲ್ಲ ಕಾಣ್ಕೆಗೆ ರೂಪಸಹಿತವಾಗಿಯೂ, ರೂಪರಹಿತವಾಗಿಯೂ ಕಟ್ಟುವ ಎರಡು ಪ್ರಯತ್ನಗಳ ಮೂಸೆಯಿಂದ ಬರುವ ಸೃಜನಶೀಲ ಸ್ಪರ್ಶದ ಅಗತ್ಯವಿರಬಹುದು. ಇಲ್ಲಿ ನಿರೂಪಕನ ನಡೆಸಿಕೊಂಡು ಹೋಗುವ ಪ್ರಯಾಣದಲ್ಲಿ ಒಂದು ರೂಪಸಹಿತತೆ ಕಾಣಿಸಿಕೊಂಡರೂ ಅದು ಕಾದಂಬರಿಯ ಪಾತ್ರಗಳ ಜೊತೆಯಲ್ಲಿ ಎಳ್ಳಷ್ಟು ತನ್ನ ವೈಯಕ್ತಿಕ ಚಿಂತನೆಯನ್ನು ಪ್ರಭಾವಿಸದೆ ಹೋಗುವುದರಿಂದ ಮತ್ತೆ ಅದು ಸಾವಯವ ಚಿತ್ರಣವಾಗಿ ಉಳಿಸುವೆಡೆಗೆ ಮುಖಮಾಡುತ್ತದೆ. ಅಂದರೆ ಇಲ್ಲಿ ನಿರೂಪಕನ ಪಾತ್ರವು ಸಹ ಒಂದು ತಂತ್ರದ ರೂಪದಲ್ಲಿ ಬಳಕೆಯಾಗಿದ್ದು ಅವನ ಪ್ರವೇಶದಿಂದ ಅಲ್ಲಿನ ಕತೆಯ ಸಾವಯವ

ಚಿತ್ರಣದಲ್ಲಿ ಬದಲಾವಣೆಗಳಾಗಲೂ ಸಾಧ್ಯವಿಲ್ಲ. ಕಥಾ ತಂತ್ರದಲ್ಲಿ ಅವನ ಇರುವು ಬದಲಿಯಾದರೂ, ಇರದೆ ಹೋದರೂ ಇಲ್ಲಿನ ವಸ್ತು ಯಥಾವತ್ತಾಗಿ ರೂಪಗೊಳ್ಳಲು ಅವಕಾಶವಿದೆ. ಹಾಗಾಗಿ ಇಲ್ಲಿ ರೂಪರಹಿತವಾದ ಕಥನಕೌಶಲ್ಯ ಹೆಚ್ಚು ಪ್ರಸ್ತುತವಾಗಿ ಕಾಣಿಸುತ್ತದೆ. ಅದರಲ್ಲೂ ವಾಸ್ತವಿಕ ನೆಲೆಯಲ್ಲಿ ರಚನೆಯಾದ ಇಂತಹ ಕಾದಂಬರಿಗಳ ವಿಷಯದಲ್ಲಿ ರೂಪಸಹಿತವಾಗಿ ಕಟ್ಟುವ ಬರದಲ್ಲಿ ಕಥಾ ವಸ್ತುವೇ ಫ್ಯಾಂಟಸಿ ಆಗಿಬಿಡುವ ಅಪಾಯವೇ ಹೆಚ್ಚು. ಹಾಗಾಗಿ ಕಾರಂತರು ಎಚ್ಚರಿಕೆಯಿಂದ ನಿಸರ್ಗದೊಟ್ಟಿಗೆ ಅಂತರಂಗ ಮತ್ತು ಬಹಿರಂಗ ಎರಡೂ ಕಡೆಗಳಲ್ಲೂ ಆಸರೆ ಹೊತ್ತು ಜೀವಿಸುತ್ತಿರುವ ಮನುಷ್ಯನ ಪಾತಳಿಯಲ್ಲಿ ನಿಂತು ನೋಡುತ್ತಾ ಜೀವ-ಭಾವದ ಪ್ರಶ್ನೆಗಳಲ್ಲಿ ಮತ್ತು ಸ್ವಂತ ಸ್ವಭಾವದ ಮೂಲಕ ಆಗುವ ಸಂಘರ್ಷಗಳಲ್ಲಿ ಏರ್ಪಡುವ ದ್ವಂದ್ವಗಳ ಚಿತ್ರಣ ಕಟ್ಟಲು Undramatised ಆಗಿ ಕಟ್ಟಿಕೊಡುವ ಪ್ರಯತ್ನಕ್ಕೆ ತೆರೆದುಕೊಂಡಂತೆ ಕಾಣುತ್ತದೆ. ಒಂದು ಕಥಾ ಎಳೆ ಹೆಚ್ಚು ಸೂಕ್ಷ್ಮವೂ ಮತ್ತು ಕಥಾ ಸಂವಿಧಾನವನ್ನು ತಲುಪಿಸುವ ಒಂದು ಸೂಕ್ತ ಮಾರ್ಗವಾಗಿಯೂ ಇದು ಮಾದರಿಯಾಗಿ ತೋರುವ ದಾರಿಯಾಗಿದೆ. ಅವರ ಅನೇಕ ಕಾದಂಬರಿಗಳ ತಂತ್ರಗಳಲ್ಲಿ ಈ ಎಳೆ ಸ್ವೋಪಜ್ಞವಾಗಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಿದಾಗ; ಕಾರಂತರ ಈ ಮಾದರಿಯ ನಿರೂಪಣೆಗಳ ಮೂಲಕವೇ ಹೆಚ್ಚೆಚ್ಚು ವಾಸ್ತವಿಕ ನೆಲೆಗಳನ್ನು ಶೋಧಿಸಲು ಮತ್ತು ಪರಿಣಾಮಕಾರಿಯಾಗಿ ತೆರೆದಿಡಲು ಸಾಧ್ಯವಾಯಿತು ಎಂಬುದು ಗಟ್ಟಿಯಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಶಿವರಾಮ ಕಾರಂತ ಕೆ., (2023), ಬೆಟ್ಟದ ಜೀವ, ಬೆಂಗಳೂರು: ಎಸ್‌ಬಿಎಸ್ ಪಬ್ಲಿಷರ್ಸ್, ಪು.ಸಂ. 09
2. ಅದೇ, ಪು.ಸಂ. 39
3. ಆಮೂರ ಜಿ.ಎಸ್., (2022), ಬೆಟ್ಟದ ಜೀವ: ನಿಸರ್ಗ ಮತ್ತು ಮನುಷ್ಯ (ಪುಸ್ತಕ: ಶಿವರಾಮ ಕಾರಂತರ ಬೆಟ್ಟದ ಜೀವ ವಿಮರ್ಶಾ ಲೇಖನಗಳು, ಸಂ: ಡಾ. ಶ್ರೀಧರ್ ಹೆಗಡೆ ಭದ್ರನ್), ವಿಜಯನಗರ, ಬೆಂಗಳೂರು: ಅರವಿಂದ ಇಂಡಿಯಾ
4. ಶಿವರಾಮ ಕಾರಂತ ಕೆ., (2023), ಬೆಟ್ಟದ ಜೀವ, ಬೆಂಗಳೂರು: ಎಸ್‌ಬಿಎಸ್ ಪಬ್ಲಿಷರ್ಸ್, ಪು.ಸಂ. 46
5. ಅದೇ, ಪು.ಸಂ. 23
6. ಯಶೋಧಾ ರಾಜೇಂದ್ರ, (2002), ಕಾರಂತರ ಕಾದಂಬರಿಗಳಲ್ಲಿ ಮಾನವ ಮತ್ತು ನಿಸರ್ಗ ಸಂಘರ್ಷ (ಪುಸ್ತಕ: ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ, ಸಂ: ಡಾ. ಬಿ. ವಿವೇಕ ರೈ ), ಮಂಗಳೂರು: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಪು.ಸಂ. 50